ಸಾಕ್ಷಿಯು ಕ್ರಮವಾಗಿ ಪ್ರಮಾಣೀಕರಿಸಿದ ದಿನಾಂಕಃ 08-04-2024

ಪಾಟಿ ಸವಾಲುಃ ಶ್ರೀ. ಜೆ.ಕೆ ವಕೀಲರಿಂದ

ನಾನು ಬಾಲಾಜಿ ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತೇನೆ. ಬಾಲಾಜಿ ಫೈನಾನ್ಸ್ ಎನ್.ಎಸ್.ಜಯರಾಂ ರವರಿಗೆ ಸೇರಿರುತ್ತದೆ. ಈ ಪ್ರಕರಣದಲ್ಲಿ ನಾನು ಎನ್.ಎಸ್.ಜಯರಾಂ ರವರಿಂದ ಜಿಪಿಎ ಪಡೆದು ಹಾಜರಾಗಿರುತ್ತೇನೆ. ಎನ್.ಎಸ್.ಜಯರಾಂ ಮತ್ತು ಆರೋಪಿ ನಡುವೆ ಆದ ವ್ಯವಹಾರ ನನಗೆ ಗೊತ್ತಿದೆ. ಅವರಿಬ್ಬರ ನಡುವೆ ಹಣದ ವ್ಯವಹಾರ ಜೂನ್ 2022 ರಲ್ಲಿ ಕಚೇರಿಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು ಹಾಜರಿದ್ದೆ. ಆರೋಪಿ ಹಣವನ್ನು ಜಯರಾಂ ರವರ ಬಳಿ ಜೂನ್ 2022 ರಲ್ಲಿ 6 ಲಕ್ಷ ಹಣ ಕೇಳಿರುತ್ತಾರೆ. ಆರೋಪಿಗೆ ಹಣವನ್ನು ವಾಪಸ್ಸು ಕೊಡುತ್ತೇನೆ ಎಂದರು ಅದಕ್ಕೆ ಹಣ ಕೊಟ್ಟಿರುತ್ತಾರೆ. ಅವರ ಗಂಡನ ವ್ಯವಹಾರಕ್ಕೆ ಆರೋಪಿ ಹಣ ಪಡೆದಿರುತ್ತಾರೆ. ಅವರ ಗಂಡನಿಗೆ ತೋಟ ಇರುತ್ತದೆ. ದೂರಿನಲ್ಲಿ ಅವರ ಗಂಡನ ವ್ಯಾಪಾರಕ್ಕೆ ಹಣ ಪಡೆದಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ.

ಆರೋಪಿಯ ಗಂಡ ಯಾವುದೇ ವ್ಯಾಪಾರ ಮಾಡುವುದಿಲ್ಲ ಆ ದಿನಾಂಕಕ್ಕೆ ಆರೋಪಿ 6 ಲಕ್ಷ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಜಯರಾಂ ರವರ ಫೈನಾನ್ಸ್ ಕಡೆಯಿಂದ ನಾನು ಪಿಗ್ಮಿ ಹಣ ವಸೂಲಿ ಮಾಡುತ್ತೇನೆ ಎಂದರೆ ಸರಿ. ಅದೇ ರೀತಿ ಪಿಗ್ಮಿ ಹಣ ಕಟ್ಟಿದವರಿಗೆ ಸಾಲ ಕೊಡುತ್ತೇವೆ ಎಂದರೆ ಸರಿ. ಆ ಸಾಲವನ್ನು ನೀಡುವಂತಹ ಸಮಯದಲ್ಲಿ ಭದ್ರತೆಗಾಗಿ ಚೆಕ್ ಅನ್ನು ಪಡೆಯುತ್ತೇವೆ ಎಂದರೆ ಸರಿಯಲ್ಲ. ಪಿಗ್ಮಿ ಸಾಲವನ್ನು ನಂಬಿಕೆ ಮೇಲೆ ಕೊಡುತ್ತೇವೆ. ಫೈನಾನ್ಸ್ ನಲ್ಲಿ

ಅನದೀಕೃತವಾಗಿ ಚೀಟಿ ವ್ಯವಹಾರ ನಡೆಸುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಫೈನಾನ್ಸ್ ನಲ್ಲಿ ಪಿಗ್ಮಿ ಕಟ್ಟುತ್ತಿದ್ದರು ದಿಃ 09-11-2018 ರಲ್ಲಿ 2 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾವು ಅವರಿಂದ ಅವರ ಖಾತೆಗೆ ಸೇರಿದ ಎಸ್.ಬಿ.ಐ ಖಾಲಿ ಚೆಕ್ಕು ಮತ್ತು ಅವರ ಗಂಡನಿಗೆ ಸೇರಿದ ವಿಜಯ ಬ್ಯಾಂಕ್ ನ ಒಂದು ಖಾಲಿ ಚೆಕ್ಕುಗಳನ್ನು ಪಡೆದಿದ್ದೇವು ಎಂದರೆ ಸರಿಯಲ್ಲ.

ಚೀಟಿ ವ್ಯವಹಾರದಲ್ಲಿ ಮೂರುವರೆ ಲಕ್ಷ ಹಣವನ್ನು ಆರೋಪಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆರೋಪಿಯಿಂದ ಒಂದು ಖಾಲಿ ಚಕ್ಕು ಮತ್ತು ಅವರ ಗಂಡನಿಂದ ಒಂದು ಖಾಲಿ ಚೆಕ್ಕನ್ನು ಪಡೆದಿದ್ದೇವು ಎಂದರೆ ಸರಿಯಲ್ಲ. ಆರೋಪಿ ಪಡೆದ ಪಿಗ್ಮಿ ಸಾಲದ ಪೈಕಿ 1,32,000/- ಮರು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಚೀಟಿ ಹಣದ ಪೈಕಿ 2,80,000/- ಮರು ಪಾವತಿ ಆರೋಪಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕು ಚೀಟಿ ವ್ಯವಹಾರ ಮತ್ತು ಪಿಗ್ಮಿ ಸಾಲಕ್ಕೆ ಸಂಬಂಧಿಸಿದಂತೆ ಪಡೆದ ಚೆಕ್ಕು ಎಂದರೆ ಸರಿಯಲ್ಲ. ಆರೋಪಿಗೆ 6 ಲಕ್ಷ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಲವನ್ನು ಕೊಡುವಾಗ ಆರೋಪಿಗೆ ವೈಯಕ್ತಿಕವಾಗಿ ಕೊಟ್ಟಿರುತ್ತೇವೆ. ನಾವು ಆದಾಯ ತೆರಿಗೆ ಪಾವತಿ ಮಾಡುತ್ತೇವೆ. ಅದರಲ್ಲಿ ಇಂತವರಿಗೆ ಇಷ್ಟು ಸಾಲ ಕೊಟ್ಟಿದ್ದೇವೆ ಎಂದು ನಮೂದು ಮಾಡುವುದಿಲ್ಲ. ಆರೋಪಿಗೆ ಸಾಲ ಕೊಟ್ಟಿಲ್ಲದೇ ಇರುವುದರಿಂದ ಆದಾಯ ತೆರಿಗೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಹೊರತುಪಡಿಸಿ ಬೇರೆ ಜನರ ಮೇಲೆ 100 ಕ್ಕಿಂತ ಹೆಚ್ಚು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ, ಸಾಕಷ್ಟು ಪ್ರಕರಣದಲ್ಲಿ ಜಯರಾಂ ರವರ ಜಿಪಿಎ ದಾರನಾಗಿ

ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಎಲ್ಲಾ ಪ್ರಕರಣಗಳು ಸಹ ಜಯರಾಂ ರವರ ವೈಯಕ್ತಿಕವಾಗಿ ನೀಡದ ಹಣದ ಪ್ರಕರಣಗಳು ಎಂದರೆ ಸರಿ. ಜಯರಾಂ ರವರಿಗೆ ಫೈನಾನ್ಸ್ ಮೂಲಕ ಬಡ್ಡಿ ವ್ಯವಹಾರ ಮಾಡಲು ಪರವಾನಿಗೆ ಇದೆ ಆದರೆ ವೈಯಕ್ತಿಕವಾಗಿ ಮಾಡಲು ಪರವಾನಿಗೆ ಇಲ್ಲ.

ಯಾವ ಚೆಕ್ ಅನ್ನು ಫೈನಾನ್ಸ್ ಮೂಲಕ ಹಾಜರುಪಡಿಸಿಲ್ಲ ಎಂದರೆ ಸರಿ. ಈ ಪ್ರಕರಣದ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ಅನ್ನು ದಿಃ 07-07-2022 ರಂದು ಫೈನಾನ್ಸ್ ನಲ್ಲಿ ನೀಡಿರುತ್ತಾರೆ, ಆ ಸಮಯದಲ್ಲಿ ನಾನು ಹಾಜರಿದ್ದೆ ಆಗ ಸಮಯ ಎಷ್ಟು ಆಗಿತ್ತು ಎಂದು ನೆನಪಿಲ್ಲ. ಚೆಕ್ ಅನ್ನು ಆರೋಪಿ ಬರೆದು ಸಹಿ ಮಾಡಿ ಕೊಟ್ಟಿರುತ್ತಾರೆ, ಆರೋಪಿ ಚೆಕ್ ಅನ್ನು ಬರೆದು ತಂದಿದ್ದರು. ದಿಃ 07-07-2022 ರಂದ ಆರೋಪಿ ಫಿರ್ಯಾದಿಗೆ ಯಾವುದೇ ಚಕ್ಕು ಕೊಟ್ಟಿಲ್ಲ ಆ ಸಮಯದಲ್ಲಿ ನಾನು ಇದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪಿಗ್ಮಿ ಸಾಲ ಮತ್ತು ಚೀಟಿ ವ್ಯವಹಾರದ ಸಂಬಂಧ ಭದ್ರತೆಗಾಗಿ ಕೊಟ್ಟಿರುವ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಕಾನೂನಿನ ನಿಯಮಗಳ ಪ್ರಕಾರ ದೂರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

Sd/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ